ನೀರವ್ ಮನೆ ಮಾರಾಟಕ್ಕೆ ಕೋರ್ಟ್ ಸಮ್ಮತಿ

ಲಂಡನ್: ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೇರಿದಂತೆ ಭಾರತದ ಹಲವು ಬ್ಯಾಂಕ್‌ಗಳಿಗೆ ಸಾವಿರಾರು ಕೋಟಿ ರು. ವಂಚಿಸಿ ದೇಶ ಬಿಟ್ಟು ಓಡಿ ಹೋಗಿ ಲಂಡನ್‌ನಲ್ಲಿ ಅಡಗಿಕೊಂಡಿರುವ ನೀರವ್ ಮೋದಿಯ ಗಡಿಪಾರು ಅರ್ಜಿ ಕುರಿತು ವಿಚಾರಣೆ ನಡೆಸುತ್ತಿರುವ ಬ್ರಿಟನ್ ನ್ಯಾಯಾಲಯ, ನೀರವ್‌ಗೆ ಸೇರಿದ ಲಂಡನ್‌ನಲ್ಲಿನ ಐಷಾರಾಮಿ ಮನೆ ಮಾರಾಟಕ್ಕೆ ಅನುಮತಿ ನೀಡಿದೆ. ಟ್ರಸ್ಟ್ ವಶದಲ್ಲಿರುವ ಅಪಾರ್ಟ್‌ಮೆಂಟ್ ಮಾರಾಟ ಮಾಡಬಹುದಾಗಿದೆ ಎಂದು ಹೇಳಿದ ನ್ಯಾಯಾಲಯ, ಈ ಅಪಾರ್ಟ್‌ಮೆಂಟ್‌ಗೆ ಕನಿಷ್ಠ 52.50 ಲಕ್ಷ ಪೌಂಡ್ ಮೌಲ್ಯ ನಿಗದಿಪಡಿಸುವಂತೆ ಕೋರ್ಟ್ ಸೂಚಿಸಿದೆ. ಆದರೆ, ಭಾರತದ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಪರ ವಕೀಲರು, ಈ ಟ್ರಸ್ಟ್‌ನ ವಶದಲ್ಲಿರುವ ನೀರವ್ ಮೋದಿಗೆ ಸಂಬಂಧಿಸಿದ ಆಸ್ತಿಗಳು ಭಾರತದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ನಲ್ಲಿ ಆರೋಪಿ ಎಸಗಿದ ಸಾವಿರಾರು ಕೋಟಿ ರು.ಗಳ ವಂಚನೆಯಿಂದ ಬಂದ ಆದಾಯದಿಂದ ಖರೀದಿಸಿದ್ದಾಗಿವೆ ಎಂದು ನ್ಯಾಯಾಲಯದಲ್ಲಿ ವಾದಿಸಿದರು.

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 199/2024
ಅರ್ಜಿದಾರರು: ಶ್ರೀ ವೆಂಕಟೇಶ್ ಬಿನ್ ಲೇಟ್ ವೆಂಕಟಬೋವಿ ವಯಸ್ಸು 73 ವರ್ಷ ವಿಳಾಸ: ವಡ್ಡರದೊಡ್ಡಿ ಗ್ರಾಮ, ಕಬ್ಬಾಳು ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ದಾಳಿಂಬ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ 1 ರಿಂದ 7 ರವರ ಅಜ್ಜಿಯವರಾದ ಶ್ರೀಮತಿ ಗೋವಿಂದಮ್ಮ ಕೋಂ ಚಿನ್ನವೆಂಕಟಬೋವಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ವಡ್ಡರದೊಡ್ಡಿ ಗ್ರಾಮದಲ್ಲಿ ದಿನಾಂಕ 14.07.1965 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 22.05.2024 ರ ಬೆಳಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಮಾರ್ಚ್ 20ನೇ ತಾರೀಖು ಈ ದಿವಸನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಕೆ. ವಿ.ಮಹದೇವಯ್ಯ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 20.3.2024

ಮಾನ್ಯ ಗೌರವಾನ್ವಿತ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 198/2024
ಅರ್ಜಿದಾರರು: ಶ್ರೀ ವೆಂಕಟೇಶ್ ಬಿನ್ ಲೇಟ್ ವೆಂಕಟಬೋವಿ ವಯಸ್ಸು 73 ವರ್ಷ ವಿಳಾಸ: ವಡ್ಡರದೊಡ್ಡಿ ಗ್ರಾಮ, ಕಬ್ಬಾಳು ಅಂಚೆ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು.
ವಿರುದ್ಧ
ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ದಾಳಿಂಬ ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ 1 ರಿಂದ 7 ರವರ ತಾತನವರಾದ ಶ್ರೀ ಚಿನ್ನವೆಂಕಟಬೋವಿ ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ವಡ್ಡರದೊಡ್ಡಿ ಗ್ರಾಮದಲ್ಲಿ ದಿನಾಂಕ 18.04.1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 22.05.2024 ರ ಬೆಳಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.
2024ರ ಮಾರ್ಚ್ 20ನೇ ತಾರೀಖು ಈ ದಿವಸನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಕೆ. ವಿ.ಮಹದೇವಯ್ಯ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 20.3.2024

U GRO CAPITAL
U GRO CAPITAL LIMITED
4th Floor, Tower 3, Equinox Business Park, LBS Road, Kurla, Mumbai 400070
ಚರಾಸ್ತಿಗಳ ಮಾರಾಟಕ್ಕಾಗಿ ಮಾರಾಟ ಸೂಚನೆ
ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ / ಜಾಮೀನುದಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಆಸ್ತಿಯನ್ನು ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್ ಹೂರಕ ಭದ್ರತಾದಾರರಿಗೆ ಅಡಮಾನ/ಚಾರ್ಜ್ ಮಾಡಿದ್ದು, ಅದನ್ನು ಹೂರಕ ಭದ್ರತಾದಾರರ ಅಧಿಕೃತ ಅಧಿಕಾರಿಯವರು ಸ್ವಾಧೀನಪಡಿಸಿಕೊಂಡಿದ್ದು, ಎಲ್.ಡಿ. ಆರ್ಬಿಟ್ರಲ್ ಪೀಠದ ಆದೇಶ ದಿನಾಂಕ 15.11.2023ರಂತೆ ಆರ್ಬಿಟ್ರೇಶನ್ ಮತ್ತು ಕನ್‌ಸಿಲಿಯೇಶನ್ ಕಾಯಿದೆ, 1996ರ ಅನ್ವಯ ಷರತ್ತು 5.1(ಬಿ)ಯ ಸಾಲ ಕಮ್ ಆರ್ಬಿಟ್ರೇಷನ್ ಒಪ್ಪಂದ ದಿನಾಂಕ 31.03.2023ರಂತೆ ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್ ಮತ್ತು ಸಾಲಗಾರರ ನಡುವಿನ ಒಪ್ಪಂದದಂತೆ ಅದನ್ನು "ಎಲ್ಲಿ ಹೇಗಿದೆಯೋ ಹಾಗಿನ ಆಧಾರದ ಮೇಲೆ" ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್‌ಗೆ ಸಾಲಗಾರಾದ 1) ಎ ಎಂ ಝೆಡ್ ಪ್ಲಾಸ್ಟಿಕ್ ಇಂಡಸ್ಟ್ರೀಸ್ 2) ಜೆ ಅಸ್ಲಾಂ ಬಾಶಾ, 3) ಮೊಹಮ್ಮದ್ ಐಬೇಲ್ ಎ (ಇನ್ನು ಮುಂದೆ "ಸಾಲಗಾರರು" ಎನ್ನಲಾಗುವುದು), ಸಾಲದ ಖಾತಾ ಸಂ. ಹೆಚ್‌ಸಿಎಫ್‌ಬಿಎಎನ್‌ಎಂಎಲ್‌ಎನ್00001048035ನ್ನು ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್‌ನಲ್ಲಿ ಹೊಂದಿದ್ದು, ಇದರಿಂದ ಸ್ವಾಧೀನತೆ ಪಡೆದುಕೊಂಡ ದಿನಾಂಕ 22.03.2024 ರವರೆಗೆ ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್‌ಗೆ ಬರಬೇಕಾದ ಬಾಕಿ ರೂ.88,22,659/- (ಎಂಭತ್ತೆಂಟು ಲಕ್ಷ ಇಪ್ಪತ್ತೆರಡು ಸಾವಿರದ ಆರುನೂರ ಐವತ್ತೊಂಬತ್ತು ರೂಪಾಯಿ ಮಾತ್ರ) ದ ವಸೂಲಿಗಾಗಿ 15.04.2024ರಂದು ಮಾರಾಟ ಮಾಡಲಿರುವರು.
ಮೀಸಲು ಬೆಲೆಯು ರೂ.79,00,000/- (ಎಪ್ಪತ್ತೊಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಅರ್ನೆಸ್ಟ್ ಠೇವಣಿ ಹಣವು ರೂ.7,90,000/- (ಏಳು ಲಕ್ಷ ತೊಂಬತ್ತು ಸಾವಿರ ರೂಪಾಯಿಗಳು ಮಾತ್ರ) ವನ್ನು 12.04.2024 ರಂದು ಅಥವಾ ಅದಕ್ಕೂ ಮೊದಲು ಠೇವಣಿಯಾಗಿಡಬೇಕು.
ಅಡಮಾನ ಮಾಡಿದ ಚರಾಸ್ತಿಗಳ ವಿವರ
ತಯಾರಿಕೆ : ಯಿಜುಮಿಪ್ರಿಸಿಶನ್ ಮೆಷಿನರಿ (ಇಂಡಿಯ) ಪ್ರೈ. ಲಿ. ಮಾದರಿ: 3 ಪ್ಲಾಟೆನ್ ಟೊಗಲ್ ಇಂಜೆಕ್ಷನ್ ಮೌಲ್ಡಿಂಗ್ ಮೆಷೀನ್ ಕ್ರಸಂ. ಐಎನ್0650ಸಿ0102 ಲಾಕಿಂಗ್ ಫೋರ್ಸ್: 650 ಟನ್ ಹೈ ಬೇಸ್ ಸ್ಕ್ರೂ ಡಯಾ: 108ಎಂಎಂ, ಮೆಷೀನ್ ಮಾದರಿ: ಯುಎನ್650ಎ5 ಜೊತೆಗೆ ಎಲ್ಲಾ ಗುಣಮಟ್ಟದ ಬಿಡಿಭಾಗಗಳು
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗಾಗಿ ಮತ್ತು ಅಡಮಾನ ಮಾಡಿರುವ ಸ್ವತ್ತುಗಳ ವಿವರಗಳಿಗಾಗಿ ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್/ಹೂರಕ ಭದ್ರತಾದಾರರ ವೆಬ್‌ಸೈಟ್ www.ugrocapital.com ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ ಅಥವಾ ಕೆಳಸಹಿದಾರರನ್ನು ಇಲ್ಲಿ ಸಂಪರ್ಕಿಸಿ authorised.officer@ugrocapital.com
ದಿನಾಂಕ: 29.03.2024
ಸ್ಥಳ: ಬೆಂಗಳೂರು
ಸಹಿ/- ರಾಮ್‌ಲಾಲ್ ಗುಪ್ತ (ಅಧಿಕೃತ ಅಧಿಕಾರಿ)
ಯು ಗ್ರೋ ಕ್ಯಾಪಿಟಲ್ ಲಿಮಿಟೆಡ್

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)
ಈ ಕಾರಣದಿಂದ,
ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ (CIN:U65923DL2006PLC150632) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **02.01.2024** ರಂದು ಕರೆದು ಸಾಲಗಾರ **ಮೋಹನ್ ಕೆ ಮಾಲಕರು ಮಂಜುನಾಥ ಅಸೋಸಿಯೇಟ್ಸ್ ಮತ್ತು ಎಚ್‌ಎಸ್ ದೀಪ್ತಿ ಮೋಹನ್ ಮಾಲಕರು ಸಾಯಿ ಮುಂಜುನಾಥ ಎಂಟರ್‌ಪ್ರೈಸಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 1,71,28,754.42 (ರೂಪಾಯಿ ಒಂದು ಕೋಟಿ ಎಪ್ಪತ್ತ ಒಂದು ಲಕ್ಷದ ಇಪ್ಪತ್ತೆಂಟು ಸಾವಿರದ ಏಳು ನೂರ ಐವತ್ತ ನಾಲ್ಕು ಮತ್ತು ಪೈಸೆ ನಲ್ವತ್ತ ಎರಡು ಮಾತ್ರ)** ಸಾಲ ಖಾತೆ ನಂ. **HLLABGM00494900** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.12.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ
ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ**ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **26.03.2024** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.
ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್** ಬಾಕಿ ಇರುವ ಮೊತ್ತ **ರೂ. 1,71,28,754.42 (ರೂಪಾಯಿ ಒಂದು ಕೋಟಿ ಎಪ್ಪತ್ತ ಒಂದು ಲಕ್ಷದ ಇಪ್ಪತ್ತೆಂಟು ಸಾವಿರದ ಏಳು ನೂರ ಐವತ್ತ ನಾಲ್ಕು ಮತ್ತು ಪೈಸೆ ನಲ್ವತ್ತ ಎರಡು ಮಾತ್ರ) 30.12.2023** ರವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.
ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.
ಸ್ಥಿರಾಸ್ತಿಯ ವರ್ಣನೆ
ಐಟಂ ನಂ.1
ಸರ್ವೆ ನಂ 56/1ಬಿ ಮತ್ತು 56/8ರಿಂದ ರಚಿಸಲಾದ ಸೈಟ್ ನಂ.79 ಅನ್ನು ಹೊಂದಿದ್ದು ತಾರೀಖು 05/12/1988 ರ ಡಿಸಿ ಕನ್ವರ್ಷನ್ ಆದೇಶ ನಂ., ಬಿಡಿಎಸ್.ಎಎಲ್‌ಎನ್.ಎಸ್‌ಆರ್ (ಎನ್) 32/88-89 ಮತ್ತು ಬ್ಯಾಟರಾಯನಪುರ ಸಿಎಮ್‌ಸಿ ಖಾತಾ ನಂ.668/849/79 ಹೊಂದಿರುವ ಸ್ಥಿರ ಖಾಲಿ ಸ್ವತ್ತಿನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, ಇಲ್ಲಿರುವಂಥಾದ್ದು: ಜರಾಕ್‌ಬಂದೆ ಕಾವಲ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು -560097, ಕರ್ನಾಟಕ, ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಮಾಪನದ್ದು, ಒಟ್ಟು 1200 ಚ.ಅಡಿ ಮಾಪನ ಹೊಂದಿದ್ದು, ಮೊಸಾಯಿಕ್ ಫ್ಲೋರಿಂಗ್, ಜಂಗಲ್ ವುಡ್ ಬಾಗಿಲುಗಳು ಮತ್ತು ಕಿಟಕಿಗಳನ್ನು ಹೊಂದಿರುವ ಆರ್‌ಸಿಸಿ ರೂಫ್‌ಡ್ ಕಟ್ಟಡ ಮತ್ತು 600 ಚ.ಅಡಿ ಏರಿಯಾದಲ್ಲಿ ನಿರ್ಮಿಸಲಾದ ಎಲ್ಲಾ ನಾಗರಿಕ ಸವಲತ್ತುಗಳೊಂದಿಗೆ ಮತ್ತು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:
ಪೂರ್ವದಲ್ಲಿ ಇದರಿಂದ : ಸೈಟ್ ನಂ.84 ಪಶ್ಚಿಮದಲ್ಲಿ ಇದರಿಂದ : ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ.80 ದಕ್ಷಿಣದಲ್ಲಿ ಇದರಿಂದ : ರಸ್ತೆ
ಐಟಂ ನಂ.2
ಸರ್ವೆ ನಂ 56/4 ರಿಂದ ರಚಿಸಲಾದ ಸೈಟ್ ನಂ.80 ಅನ್ನು ಹೊಂದಿದ್ದು ತಾರೀಖು 13/02/1887 ರ ಡಿಸಿ ಕನ್ವರ್ಷನ್ ಆದೇಶ ನಂ., ಬಿಡಿಎಸ್.ಎಎಲ್‌ಎನ್.ಎಸ್‌ಆರ್ (ಎನ್) 54/85-86 ಮತ್ತು ಬ್ಯಾಟರಾಯನಪುರ ಸಿಎಮ್‌ಸಿ ಖಾತಾ ನಂ.226/243/80 ಹೊಂದಿರುವ ಖಾಲಿ ಸ್ಥಿರ ಸ್ವತ್ತಿನ ಆ ಎಲ್ಲಾ ತುಂಡು ಮತ್ತು ಪಾರ್ಸೆಲ್, ಇಲ್ಲಿರುವಂಥಾದ್ದು: ಜರಾಕ್‌ಬಂದೆ ಕಾವಲ್ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು, ಬೆಂಗಳೂರು -560097, ಕರ್ನಾಟಕ, ಪೂರ್ವದಿಂದ ಪಶ್ಚಿಮಕ್ಕೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 40 ಅಡಿ ಮಾಪನದ್ದು, ಒಟ್ಟು 1200 ಚ.ಅಡಿ ಮಾಪನ ಹೊಂದಿದ್ದು, ತಳ ಮಹಡಿ 800 ಚ.ಅಡಿ ಮತ್ತು ಮೊದಲನೆಯ ಮಹಡಿ 900 ಚ.ಅಡಿ ಹೊಂದಿರುವ ಮೊಸಾಯಿಕ್ ಫ್ಲೋರಿಂಗ್, ಜಂಗಲ್ ವುಡ್ ಬಾಗಿಲುಗಳು ಮತ್ತು ಕಿಟಕಿಗಳನ್ನು ಹೊಂದಿರುವ ಆರ್‌ಸಿಸಿ ರೂಫ್‌ಡ್ ಕಟ್ಟಡ ಮತ್ತು ಎಲ್ಲಾ ನಾಗರಿಕ ಸವಲತ್ತುಗಳೊಂದಿಗೆ ಮತ್ತು ಈ ಕೆಳಗಿನಂತೆ ಸುತ್ತುವರಿಯಲ್ಪಟ್ಟಿದೆ:
ಪೂರ್ವದಲ್ಲಿ ಇದರಿಂದ : ಸೈಟ್ ನಂ.83
ಪಶ್ಚಿಮದಲ್ಲಿ ಇದರಿಂದ : ರಸ್ತೆ
ಉತ್ತರದಲ್ಲಿ ಇದರಿಂದ : ಸೈಟ್ ನಂ.81
ದಕ್ಷಿಣದಲ್ಲಿ ಇದರಿಂದ : ದಕ್ಷಿಣದಲ್ಲಿ ಇದರಿಂದ: ಸೈಟ್ ನಂ.79 ಅನ್ನು ಹೊಂದಿರುವ ಸ್ವತ್ತು
ದಿನಾಂಕ : 26.03.2024
ಸ್ಥಳ : ಬೆಂಗಳೂರು
ಅಧಿಕಾರವಿರುವ ಅಧಿಕಾರಿ
ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್

ತನಿಖೆಗೆ ಸಹಕಾರ ನೀಡುತ್ತಿಲ್ಲ, ತನಿಖಾಧಿಕಾರಿಯ ಪ್ರಶ್ನೆಗಳಿಗೆ ಹಾರಿಕೆ ಉತ್ತರ ನೀಡುತ್ತಾರೆ: ಇ.ಡಿ ಪರ ವಕೀಲರು

ಕೇಜ್ರಿವಾಲ್ ಇ.ಡಿ ಕಸ್ಟಡಿ ಏ.1ರವರೆಗೆ ವಿಸ್ತರಣೆ

ದೆಹಲಿ: ವಿವಾದಿತ ಅಬಕಾರಿ ನೀತಿಯ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ, ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರನ್ನು ಮತ್ತೆ ಜಾರಿ ನಿರ್ದೇಶನಾಲಯದ(ಇ.ಡಿ) ಕಸ್ಟಡಿಗೆ ಏ.1ರ ವರೆಗೂ ಒಪ್ಪಿಸಿ ದೆಹಲಿಯ ರೂಸ್ ಅವೆನ್ಯೂ ನ್ಯಾಯಾಲಯ ಗುರುವಾರ ಆದೇಶ ಹೊರಡಿಸಿದೆ.

6 ದಿನಗಳ ಕಷ್ಟಡಿ ಅವಧಿ ಗುರುವಾರಕ್ಕೆ